ಶ್ರೀ ಎನ್. ಸಂಪಂಗಿ : ಯಾವ ದಿನಾಂಕದೊಳಗೆ ಮಾಡುತ್ತೇವೆಂಬುದರ ಬಗ್ಗೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ನಿಗದಿ ಮಾಡಿ ಕೊಡಲಿ.

(ಗೊಂದಲ)

ಶ್ರೀ ಮುರುಗೇಶ್ ನಿರಾಣಿ : ಮಾನ್ಯ ಅಧ್ಯಕ್ಷರೆ, ಸದನ ಮುಗಿದ ಮೇಲೆ ಅಥವಾ ನಾಳೆ ಬೆಳಿಗ್ಗೆ ಅವರನ್ನು ಕರೆದು ಪರಿಹಾರ ಮಾಡುತ್ತೇವೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ನಿಮ್ಮನ್ನು ಕರೆದು ಪರಿಹಾರ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಡಾ॥ ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಇನ್ನು ಕೇವಲ ಐದು ದಿವಸ ಸದನ ನಡೆಯುತ್ತದೆ. ಆದ್ದರಿಂದ, ನಮ್ಮ ಜಿಲ್ಲೆಯ ವಿಚಾರದ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾಳೆ ಬೆಳಿಗ್ಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. ಈ ವಿಷಯ ಇಲ್ಲಿಗೆ ಮುಗಿಯಿತು.

ಡಾ॥ ಎಂ.ಸಿ. ಸುಧಾಕರ್ : ಇನ್ನು ಐದು ದಿವಸದಲ್ಲಿ ನಮ್ಮ ಜಿಲ್ಲೆಯ ಎಲ್ಲ ಶಾಸಕರ ಒಂದು ಸಭೆಯನ್ನು ದಯವಿಟ್ಟು ಕರೆದು ಪರಿಹಾರ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮುರುಗೇಶ್ ನಿರಾಣಿ : ನಾಳೆ ಬೆಳಿಗ್ಗೆ 10.00 ಗಂಟೆಗೆ ಕರೆಯುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ವಸಂತ ಬಂಗೇರವರದು ಇದೆ. ಮಾನ್ಯ ವಸಂತ ಬಂಗೇರರವರು ಇಲ್ಲ.

ಪ್ರಶ್ನೆ ಸಂಖ್ಯೆ 70(24)

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಮುನಿಯಪ್ಪನವರೆ, ಕೇಳಿ.

ಅಂತರಿಕ್ಷ ಸಂಸ್ಥೆ (N.R.S.A.) ವರದಿ

71 (159) ಶ್ರೀ ಮುನಿಯಪ್ಪ ವಿ. (ಶಿಡ್ಲಘಟ್ಟ) :– ಮಾನ್ಯ ಜಲಸಂಪನ್ಮೂಲ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಡಾ॥ ಪರಮಶಿವಯ್ಯ ವರದಿ ಆಧರಿಸಿ ಹೈದರಾಬಾದ್ ಎನ್.ಆರ್.ಎಸ್.ಎ. (ಅಂತರಿಕ್ಷ ಸಂಸ್ಥೆಗೆ) ಸಮೀಕ್ಷೆ ಮಾಡಲು ರಾಜ್ಯ ಸರ್ಕಾರಕ್ಕೆ ವಹಿಸಿಕೊಟ್ಟಿದ್ದು, ಸದರಿ ಸಂಸ್ಥೆಯು ನೀಡಿರುವ ವರದಿಯ ವಿವರವೇನು ?

ಆ) ಆ ಸಂಸ್ಥೆ ಕೊಟ್ಟಿರುವ ವರದಿ ತಾಂತ್ರಿಕವಾಗಿ ಅದರ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ನಡೆಸಲು ತಾಂತ್ರಿಕ ತಜ್ಞರ ನೇಮಕ ಆಗಿದೆಯೇ ; ಹಾಗಿದ್ದಲ್ಲಿ ತಾಂತ್ರಿಕ ತಜ್ಞರ ವರದಿ ವಿವರ ನೀಡುವುದು ;

ಇ) ಈ ವರದಿ ಆಧರಿಸಿ ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ ;

ಈ) ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ನೀರನ್ನು ಒದಗಿಸಲು ಸರ್ಕಾರ ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):–

ಅ) ಶ್ರೀ ಜಿ.ಎಸ್. ಪರಮಶಿವಯ್ಯನವರ ವರದಿಯಲ್ಲಿರುವಂತೆ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ (ALTM-Airborne Laser Terrain Mapping) ಕೈಗೊಂಡು, ಮೆ॥ ಎನ್.ಆರ್.ಎಸ್.ಸಿ. ಸಂಸ್ಥೆ, ಹೈದರಾಬಾದ್ ಇವರು 1 ಮೀ. ಹಾಗೂ 5 ಮೀ.ನ Countour Interval ಇರುವ ನಕ್ಷೆಗಳನ್ನು DEM (Digital Elevation Model), Orthophotos ಗಳ ಸಾಫ್ಟ್ ಪ್ರತಿಗಳನ್ನು ನೀಡಿರುತ್ತಾರೆ.

ಆ) ಎನ್.ಆರ್.ಎಸ್.ಎ. ಸಂಸ್ಥೆಯು ಕೇವಲ ಸರ್ವೆ ಸಮೀಕ್ಷೆಯ ಮಾಹಿತಿ ಮಾತ್ರ ನೀಡಿರುತ್ತದೆ. ಯೋಜನೆಯ ಸೇವಾ ಕಾಲುವೆ ಸರ್ವೆ ಕಾರ್ಯವನ್ನು ಮೆ॥ ಎನ್.ಆರ್.ಎಸ್.ಸಿ. ಸಂಸ್ಥೆಯು ಮಾಡಿರುವುದಿಲ್ಲ. ಸೇವಾ ಕಾಲುವೆಯ ಸರ್ವೆ, ಸಮೀಕ್ಷೆಯನ್ನು ಕೈಗೊಳ್ಳಲು ಮತ್ತು ಈ ಸರ್ವೆ, ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಿ, ಯೋಜನೆಯ ವಿವರವಾದ ವರದಿ (Detailed Project Report-DPR) ಯನ್ನು ತಯಾರಿಸಲು ಟೆಂಡರ್ ಕರೆಯಲಾಗಿದೆ. ಯೋಜನೆಯ DPR ತಯಾರಾದ ಮೇಲೆ ಯೋಜನೆ ಪ್ರದೇಶದ ಸಂಪೂರ್ಣ ಮಾಹಿತಿ ಲಭ್ಯವಾಗುವುದರಿಂದ ಯೋಜನೆಯ ಸಾಧಕ–ಬಾಧಕಗಳ ಬಗ್ಗೆ ಅಧ್ಯಯನ ಮಾಡಲು ಸಾಧ್ಯವಾಗುವುದು. ನಂತರ ಈ ಕುರಿತ ಅಧ್ಯಯನ ನಡೆಸಲು ತಾಂತ್ರಿಕ ತಜ್ಞರ ಸಮಿತಿ ನೇಮಿಸಲಾಗುವುದು.

ಇ) ಮೇಲೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಬರಗಾಲ ಪೀಡಿತ ಪ್ರದೇಶಗಳಿಗೆ ಶಾಶ್ವತ ಕುಡಿಯುವ ನೀರು ಹಾಗೂ ಅಂತರ್ಜಲ ಹೆಚ್ಚಿಸಲು ಶ್ರೀ ಜಿ.ಎಸ್. ಪರಮಶಿವಯ್ಯನವರ ಯೋಜನೆಯ ಮಾಲಾ ಕಾಲುವೆಯ ಸರ್ವೆ ಸಮೀಕ್ಷೆಯನ್ನು ಮೆ॥ ಎನ್.ಆರ್.ಎಸ್.ಸಿ. ಸಂಸ್ಥೆಯವರು ಕೈಗೊಂಡು ತಾಂತ್ರಿಕ ಮಾಹಿತಿಯನ್ನು ಒದಗಿಸಿರುತ್ತಾರೆ. ಇನ್ನುಳಿದ ಕೆಲಸವಾದ ಸೇವಾ ಕಾಲುವೆ ಸರ್ವೆ ಸಮೀಕ್ಷೆ ಮಾಡುವುದು ಮತ್ತು ವಿವರವಾದ ಯೋಜನಾ ವರದಿ ತಯಾರಿಕೆ ಮಾಡಲು ಈಗಾಗಲೇ ಟೆಂಡರ್ ಕರೆಯಲಾಗಿದೆ. ವಿವರವಾದ ಯೋಜನಾ ವರದಿ ತಯಾರಾದ ಮೇಲೆ ಯೋಜನೆ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

ಇದಲ್ಲದೆ, ಕೂಡಲೇ ಬರಪೀಡಿತ ಜಿಲ್ಲೆಗಳಿಗೆ ಸುಮಾರು 25 ಟಿಎಂಸಿ ನೀರನ್ನು ಒದಗಿಸಲು ಎತ್ತಿನಹೊಳೆ ಯೋಜನೆಯನ್ನು ರೂಪಿಸಿ ಶಕ್ಯತಾ ವರದಿಯನ್ನು (feasibility report) ಸಿದ್ಧಪಡಿಸಿ, ಕರ್ನಾಟಕ ನೀರಾವರಿ ನಿಗಮದ ಮುಂದೆ ಅನುಮತಿಗಾಗಿ ಇಡಲಾಗಿದೆ.

ಶ್ರೀ ವಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ಎಲ್ಲಾ ಅಧಿವೇಶನಗಳಿಂದ ಸತತವಾಗಿ ನಮ್ಮ ಜಿಲ್ಲೆಯವರು ಈ ಪ್ರಶ್ನೆಯನ್ನು ಹಾಕುತ್ತಾ ಬರುತ್ತಿದ್ದೇವೆ. ಈ ಸಂದರ್ಭದಲ್ಲಿ ನನ್ನ ಪ್ರಶ್ನೆ ಏನೆಂದರೆ, ನೀರಾವರಿ ವಿಚಾರದ ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡಿ ಎಂದು ಡಾ॥ ಪರಮಶಿವಯ್ಯನವರನ್ನು ಯಾವ ತಾರೀಖಿನಲ್ಲಿ ಸರ್ಕಾರ ನೇಮಕ ಮಾಡಿದ್ದರು? ತದನಂತರ ಅವರು ಯಾವ ತರಹದ ವರದಿಯನ್ನು ಕೊಟ್ಟಿದ್ದಾರೆ? ವರದಿ ಕೊಟ್ಟ ನಂತರ ಅದನ್ನು ಎನ್.ಆರ್.ಎಸ್.ಎ. ಗೆ ಯಾವಾಗ ಕಳುಹಿಸಿಕೊಟ್ಟಿದ್ದರು? ಅವರ ಪ್ರಥಮ ಹಂತದ ವರದಿ ಬಂದ ನಂತರ ಆ ವರದಿಗನುಗುಣವಾಗಿ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಾ? ಇವತ್ತು ಅಲ್ಲಿ ಸುಮಾರು 70 ತಾಲ್ಲೂಕುಗಳು ಕಳೆದ 20–25 ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗುತ್ತಿವೆ. ಇದರ ಜೊತೆಗೆ ಅಲ್ಲಿರತಕ್ಕಂತಹ ಅಂತರ್ಜಾಲ ಪಾತಾಳಕ್ಕೆ ಹೋಗಿದೆ. ಕೊಳವೆ ಬಾವಿಗಳನ್ನು 1000 ಅಡಿಗಳಷ್ಟು ಕೊರೆದರೂ ಕುಡಿಯುವ ನೀರು ಸಿಕ್ಕುತ್ತಿಲ್ಲ. ಒಂದು ಪಕ್ಷ ನೀರು ಸಿಕ್ಕಿದರೂ ಅದು ಕಳಪೆಯಾಗಿ polluted water ನಿಂದ ಕೂಡಿರುತ್ತದೆ. ದುರಾದೃಷ್ಟವೆಂದರೆ ಅಲ್ಲಿ ಆ ನೀರನ್ನು ಬಿಟ್ಟರೆ ಬೇರೆ ನೀರು ಕುಡಿಯುವುದಕ್ಕೆ ಸಿಗುವುದಿಲ್ಲ. Surface water ಎಲ್ಲೂ ಇಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿರುವ 70 ತಾಲ್ಲೂಕುಗಳ ಗಂಭೀರತೆಯನ್ನು ಸರ್ಕಾರ ಅರ್ಥಮಾಡಿಕೊಳ್ಳಬೇಕು. ಆದರೆ, ಪ್ರತಿಸಾರಿ ಕೂಡ ಈ ಪ್ರಶ್ನೆಗೆ ಒಂದೇ ರೀತಿಯ stereo

reply ಬರುತ್ತಾ ಇದೆ. ಈ stereo reply ತೆಗೆದುಕೊಂಡು ನಾವು ಏನು ಮಾಡಬೇಕು ಹೇಳಿ. ಇದಕ್ಕೆ ಏನಾದರೊಂದು ಶಾಶ್ವತವಾದ ಪರಿಹಾರ ಕೊಂಡುಕೊಳ್ಳಬೇಕಾದಂಥ ಅವಶ್ಯಕತೆ ಇದೆ. ಈ ಒಂದು ಯೋಜನೆಗೆ ಹಿಂದಿನ ಸರ್ಕಾರ ಚಾಲನೆ ಕೊಟ್ಟು ಹನ್ನೊಂದು ವರ್ಷಗಳಾಗಿದೆ. ಹನ್ನೊಂದು ವರ್ಷಗಳಾದರೂ ಸರ್ಕಾರ ಒಂದು ನಿರ್ದಿಷ್ಟವಾಗಿ face ಮಾಡುವುದಕ್ಕೆ ಆಗುತ್ತಿಲ್ಲ. ಎಂದರೆ, ಬಹುಶಃ ಬರತಕ್ಕಂಥ ಸರ್ಕಾರಗಳು ಇದರ ಬಗ್ಗೆ ಎಷ್ಟು ಆಸಕ್ತಿ ವಹಿಸುತ್ತದೆ ಮತ್ತು ಅಲ್ಲಿರತಕ್ಕಂತಹ ಗಾಂಭಿರ್ಯತೆಯನ್ನು ಎಷ್ಟರ ಮಟ್ಟಿಗೆ ಗಮನಿಸುತ್ತಿದೆ ಎಂಬುದಕ್ಕೆ ನಿರ್ದಿಷ್ಟವಾದಂತಹ ಉತ್ತರವನ್ನು ಕೊಡಬೇಕು. ಅಲ್ಲಿರತಕ್ಕಂತಹ ಗಾಂಭೀರ್ಯತೆಯ ಬಗ್ಗೆ ನಿಮ್ಮ ಸರ್ಕಾರಕ್ಕೆ ಸ್ಪಷ್ಟವಾದ ಮಾಹಿತಿ ಇದ್ದಿದ್ದರೆ ಖಂಡಿತವಾಗಿ ಆದ್ಯತೆ ಮೇಲೆ ಈ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು. ದಯವಿಟ್ಟು ಇದಕ್ಕೆ ಉತ್ತರ ಕೊಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ನಮ್ಮ ಹಿರಿಯ ಸದಸ್ಯರು ಮತ್ತು ಮಾಜಿ ಸಚಿವರು ಹಾಗೂ ಆ ಭಾಗದಲ್ಲಿ ಪ್ರತಿನಿಧಿಸುವಂತಹ ಮಾನ್ಯ ಮುನಿಯಪ್ಪನವರು ಬಹಳ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ಜಿ.ಎಸ್. ಪರಮಶಿವಯ್ಯನವರನ್ನು ವರದಿ ಮಾಡಬೇಕೆಂದು ಹೇಳಿ ಸರ್ಕಾರ 2002 ರಲ್ಲಿ ನೇಮಕ ಮಾಡಿದ ಮೇಲೆ, 2003–04ರಲ್ಲಿ ವರದಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಅದನ್ನು ಎನ್. ಆರ್.ಎಸ್.ಎ.ಗೆ ರೆಫರ್ ಮಾಡಿದೆವು. ಎನ್.ಆರ್.ಎಸ್.ಎ.ಗೆ ರೆಫರ್ ಮಾಡಿದ ಮೇಲೆ ಅದಕ್ಕೆ ಕೊಡಬೇಕಾದಂತಹ ಹಣ ಸಂಪೂರ್ಣವಾಗಿ ಕೊಡದೇ ಇರುವ ಕಾರಣದಿಂದ 2008ರವರೆಗೂ ಯಾವುದೇ ರೀತಿಯ ಸಹಾಯ ನಮಗೆ ಸಿಗಲಿಲ್ಲ. ತದನಂತರ ನಮ್ಮ ಸರ್ಕಾರ ಬಂದ ಮೇಲೆ ಅದಕ್ಕೆ ಬೇಕಾಗಿರುವಂತಹ ಹಣ ಕೊಟ್ಟ ಮೇಲೆ ಅವರು ವರದಿಯನ್ನು ಕೊಟ್ಟಿದ್ದಾರೆ. ಪರಮಶಿವಯ್ಯರವರ ವರದಿಯ ಆಧಾರದ ಮೇಲೆ ಮುಖ್ಯವಾಗಿ Airborne Laser Terrain Mapping ಎಂದು ಮಾಡಿದ್ದೇವೆ. ಅದರಲ್ಲಿ Contour Intervals and Digital Elevation Model, Orthophotos ಗಳನ್ನು ಸಂಪೂರ್ಣವಾಗಿ digital Mapping ಮುಖಾಂತರ software ರೀತಿಯಲ್ಲಿ ನಮಗೆ ಕೊಟ್ಟಿದ್ದಾರೆ. ಇದು ಬಹಳ basic ಆಗಿರುವುದರಿಂದ ನಮಗೆ ಇದು ಬೇಕಾಗಿತ್ತು. ಸೂಕ್ಷ್ಮವಾಗಿರುವಂತಹ ಪಶ್ಚಿಮ ಘಟ್ಟದ ಪ್ರದೇಶಗಳಲ್ಲಿ ಸರ್ವೆ ಮಾಡುವುದಕ್ಕೆ ಎಷ್ಟು ಕಷ್ಟಕರ ಎನ್ನುವುದು ನಿಮಗೆ ಗೊತ್ತಿದೆ. ಆ ಹಿನ್ನೆಲೆಯಲ್ಲಿ Airborne ಸರ್ವೆ ಮಾಡಬೇಕಾಗಿತ್ತು. ಆ ಪ್ರಕಾರ ಅವರು ಮಾಡಿಕೊಟ್ಟಿದ್ದಾರೆ. ಅವರು ಸರ್ವೆ ಮಾಡಿ ಕೊಟ್ಟಿದ್ದು ಇದರಲ್ಲಿ Column canals and

service canals ಬಗ್ಗೆ ಅವರು details ಕೊಟ್ಟಿಲ್ಲ. Column canals and service canals Combinations ಏನಿದೆ ಇದು ಬಹಳ ಮುಖ್ಯವಾಗಿದೆ. ಇದಿಲ್ಲದೆ ನಾವು ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ಆ ಹಿನ್ನೆಲೆಯಲ್ಲಿ service canals ಮಾಡಬೇಕಾದರೆ ನಾವು physical ಹಾಗೆಯೇ ಸರ್ವೆ ಮಾಡಬೇಕಾಗುತ್ತದೆ. ಇದು ಬಹಳ ದೊಡ್ಡ ಪ್ರಮಾಣದ ಸರ್ವೆ, ಬರೀ ಸರ್ವೆ ಅಷ್ಟೇ ಅಲ್ಲ DPR (Detailed Project Report) ಮಾಡಬೇಕಾಗುತ್ತದೆ. ಇದಕ್ಕಾಗಿ ಈಗಾಗಲೇ ನಾವು ಟೆಂಡರನ್ನು ಕೂಡ ಕರೆದಿದ್ದೇವೆ. ಮುಖ್ಯವಾಗಿ ಬರಪೀಡಿತ ಪ್ರದೇಶಕ್ಕೆ ಸಂಬಂಧಪಟ್ಟಂತೆ ಡಾ॥ ಜಿ.ಎಸ್. ಪರಮಶಿವಯ್ಯನವರ ವರದಿ ಬಹಳ ವಿಸ್ತೃತವಾಗಿದ್ದು ಅಂದರೆ, ಅವರ report part-1,2,3 ಇದೆ. ಇದರಲ್ಲಿ entire ಪಶ್ಚಿಮ ಘಟ್ಟದ ಕೊಡಗಿನಿಂದ ಹಿಡಿದು ಬೇಡ್ತಿಯವರೆಗೂ ಯಾವ ರೀತಿಯಾಗಿ flowing rivers ಅನ್ನು divert ಮಾಡಬೇಕೆಂದು ಮತ್ತು ಅದನ್ನು ಎಲ್ಲೆಲ್ಲಿ ಪೂರ್ವಾಭಿಮುಖವಾಗಿ ಹರಿಸಬೇಕೆಂದು ಮತ್ತು ಯಾವ್ಯಾವ ನದಿಗೆ ಜೋಡಣೆ ಮಾಡಬೇಕು ಎನ್ನುವ ವಿಚಾರವನ್ನು ಇಡೀ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಅವರು ಎಲ್ಲವನ್ನು ಮಾಡಿದ್ದಾರೆ. ಡಾ॥ ಪರಮಶಿವಯ್ಯನವರ ವರದಿಯ ಮೇಲೆ ಸಂಪೂರ್ಣವಾಗಿ DPR ಮಾಡಿ ಎಂದು ನಾವು ಕೊಟ್ಟಿದ್ದೇವೆ. ಅದು ಆದ ಮೇಲೆ ನನಗೆ ಡಾ॥ ಪರಮಶಿವಯ್ಯನವರು ಒಂದು ಪತ್ರವನ್ನು ಬರೆದಿರುತ್ತಾರೆ. ಆ ಪತ್ರದಲ್ಲಿ ವಿವರವಾಗಿ ಅವರು ಎಲ್ಲವನ್ನು ಹೇಳಿ ಸುಮಾರು 28 enclosures ಮತ್ತು maps ಎಲ್ಲವನ್ನು ಕೊಟ್ಟ ಮೇಲೆ ಅದರ ಅನುಗುಣವಾಗಿ ಮಾಡಬೇಕೆಂದು ಹೇಳಿ ಇವತ್ತು ಅವರು ಹೇಳಿರುವುದನ್ನು ಅಳವಡಿಸಿರುತ್ತೇವೆ. ಈ ಮಧ್ಯೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಏನು ವಿರೋಧ ಇದೆ, ಅಲ್ಲಿ environmental sensitive zone ಎಂದು ಇವತ್ತು UNICEF ದಿಂದ ಹಿಡಿದು ಎಲ್ಲರೂ ಕೂಡ ಅದನ್ನು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇವತ್ತು ತೀರ್ಥಹಳ್ಳಿ ಈಗ ಇರುವಂಥ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ರೂರಲ್, ತುಮಕೂರು ಮತ್ತು ಚಿತ್ರದುರ್ಗ ಈ ಎಲ್ಲಾ ಭಾಗದ....

ಶ್ರೀ ಹೆಚ್.ಸಿ. ಬಾಲಕೃಷ್ಣ:– ದಯಮಾಡಿ ಅದಕ್ಕೆ ರಾಮನಗರವನ್ನು ಸೇರಿಸಿಕೊಳ್ಳಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಅದಕ್ಕಾಗಿ ಬೆಂಗಳೂರು ರೂರಲ್ ಎಂದು ಹೇಳಿರುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ :– ಬೆಂಗಳೂರು ರೂರಲ್ ಮತ್ತು ರಾಮನಗರ ಈಗ ಬೇರೆ ಆಗಿದೆ.

ಶ್ರೀ ಬಸರಾಜ ಬೊಮ್ಮಾಯಿ:– ಅದಕ್ಕಾಗಿ ನಾನು ಹಳೆಯ ಬೆಂಗಳೂರು ರೂರಲ್ ಎಂದು ಹೇಳಿರುತ್ತೇನೆ. ಈ ಎಲ್ಲದಕ್ಕೂ ಕೂಡ ನೀರನ್ನು ಒದಗಿಸಬೇಕೆಂದು ಹೇಳಿ ಇವತ್ತು ಎತ್ತಿನಹೊಳೆ ಯೋಜನೆಗೆ ಒಂದು feasibility report ನ್ನು ನಾವು ಈಗಾಗಲೇ ಮಾಡಿದ್ದೇವೆ. ಅದರಲ್ಲಿ ಎತ್ತಿನಹೊಳೆ ಜೊತೆಗೆ ಮೂರು ಹಳ್ಳಗಳು ಒಂದು ಕಡೆ convenient ಆಗುತ್ತವೆ. ಕೇರಿ ಹೊಳೆ, ಮಂಗದ ಹೊಳೆ, ಕಾರ್ಮನಿ ಹೊಳೆ ಇದಕ್ಕೆ ಸಂಪೂರ್ಣವಾದ feasibility report ನ್ನು ನಾವು ಮಾಡಿದಾಗ ಸುಮಾರು 25 TMC ನೀರು ನಮಗೆ ಲಭ್ಯವಾಗುತ್ತದೆ. ಆ ನೀರನ್ನು ನಾವು ತುಮಕೂರು ಜಿಲ್ಲೆಯ ಮುಖಾಂತರ ಕೋಲಾರ, ಚಿಕ್ಕಬಳ್ಳಾಪುರ ಆಗಲೇ ಹೇಳಿದಂತೆ ರಾಮನಗರ, ಬೆಂಗಳೂರು ರೂರಲ್ ಸೇರಿದಂತೆ ತುರ್ತಾಗಿ ಕೆರೆ ತುಂಬಿಸುವಂಥ ಕೆಲಸವನ್ನು ಎಲ್ಲಾ ಜಿಲ್ಲೆಯ ಎಲ್ಲಾ ಕೆರೆಗಳು, ಚಿಕ್ಕಬಳ್ಳಾಪುರದ ಎಲ್ಲಾ ಕೆರೆಗಳು, ತುಮಕೂರು ಜಿಲ್ಲೆಯಿಂದ ಬಿಟ್ಟು ಹೋದಂಥ ಮಧುಗಿರಿ, ಪಾವಗಡ, ಕೊರಟಗೆರೆ ಮತ್ತು ಉಳಿದಂಥ ಕೆರೆಗಳನ್ನು ತುಂಬಿಸುವಂಥದ್ದು. ಅದರ ನಂತರ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗ ಎಲ್ಲವನ್ನು ಕೂಡ ಮಾಡುವುದಕ್ಕೆ ಸಾಧ್ಯತೆ ಇದೆ. ಒಳ್ಳೆಯ feasibility report ಬಂದಿದೆ. ಅದನ್ನು ನಮ್ಮ TAC ಯವರು ಒಪ್ಪಿಕೊಂಡಿದ್ದಾರೆ. ನಮ್ಮ ಬೋರ್ಡಿನಲ್ಲಿ ಕೂಡ ಆ ಪ್ರಸ್ತಾವನೆ ಮಾಡಿದೆವು. ಅಷ್ಟೆ ಅಲ್ಲ ಇದನ್ನು ಅತ್ಯಂತ fast track ನಲ್ಲಿ ಮಾಡುವ ಒಂದು ದೃಷ್ಟಿಯಿಂದ ಮತ್ತು ಇವತ್ತು ಹಣಕಾಸಿನ ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಅದರಲ್ಲಿ environmental study ಮಾಡಬೇಕು, economic feasibility study ಮಾಡಬೇಕು. PPP model ನಲ್ಲಿ ಮಾಡಿದರೆ ಅದು ಬೇಗ ಆಗುತ್ತದೆ ಎನ್ನುವ ದೃಷ್ಟಿಯಿಂದಲೂ ಕೂಡ ಆ ಒಂದು ಪ್ರಪೋಸಲ್‌ನ್ನು ನಮ್ಮ ಬೋರ್ಡ್ ಮುಂದೆ ಇಟ್ಟಿದ್ದೇವೆ. ಮುಂದಿನ ಬೋರ್ಡಿನಲ್ಲಿ ಅದು ಒಪ್ಪಿಗೆ ಆದರೆ ಕೇವಲ 4–5 ತಿಂಗಳಲ್ಲಿ ಎತ್ತಿನಹೊಳೆಯ ಒಂದು ಕಾಮಗಾರಿಗೆ ಒಂದು ಟೆಂಡರ್ ಪ್ರಕ್ರಿಯೆಯನ್ನು ಇವತ್ತು ಪ್ರಾರಂಭ ಮಾಡಬೇಕು. ಆ ಹಿನ್ನೆಲೆಯಲ್ಲಿ ಒಂದನೆಯದು ದೂರದೃಷ್ಟಿ, long term plan ಡಾ॥ ಪರಮಶಿವಯ್ಯನವರ ವರದಿಯನ್ನು ಅನುಷ್ಠಾನ ಮಾಡುವಂಥದ್ದು. ಸುಮಾರು 300TMC ಗಿಂತ ಹೆಚ್ಚು ನೀರು ಪಶ್ಚಿಮ ಮುಖಿಯಿಂದ ಕೊಡುವ ಒಂದು ಸಾಧ್ಯತೆ ಇದೆ ಎನ್ನುವುದು ಡಾ॥ ಪರಮಶಿವಯ್ಯನವರ ವರದಿ ಏನಿದೆ ಅದಕ್ಕೆ ಒಂದು DPR ತಯಾರು ಮಾಡಬೇಕು. ತಯಾರು ಮಾಡುವುದು ತಡವಾಗುತ್ತದೆ. ಏಕೆಂದರೆ ಬಹಳ ದೊಡ್ಡ ಪ್ರಮಾಣದ DPR ಬೇಕು. ಇದಕ್ಕೆ ಸುಮಾರು 23.50 ಕೋಟಿ ರೂ.ಗಳ ಅವಶ್ಯಕತೆ ಇದೆ. ಈಗಾಗಲೇ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟಿದ್ದೇವೆ, ಕ್ಯಾಬಿನೆಟ್ ಅನುಮೋದನೆ ಕೊಟ್ಟಿದೆ,

ಹಣವನ್ನು ಕೂಡ ಇಟ್ಟಿದ್ದೇವೆ, ಆ ಪ್ರಕ್ರಿಯೆ ನಡೆಯುತ್ತಿದೆ. ಆದರೆ ಆ DPR ಎಲ್ಲವನ್ನು ಮಾಡಿ ಈ ಭಾಗದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ತಡವಾಗುತ್ತದೆ ಎನ್ನುವ ಒಂದು ದೃಷ್ಟಿಯಿಂದ ಈ ಎತ್ತಿನಹೊಳೆಯ ಪ್ರಾಜೆಕ್ಟ್‌ನ್ನು ನಾವು ಕೈಗೆತ್ತಿಕೊಳ್ಳಬೇಕೆಂದು ಹೇಳಿ ಅತ್ಯಂತ ಗಂಭೀರವಾಗಿ ಪರಿಗಣಿಸಿ ಈ ಕೆಲಸವನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ. ಏಪ್ರಿಲ್, ಮೇ ತಿಂಗಳ ಒಳಗಡೆ ಈ ಕಾಮಗಾರಿಗಳಿಗೆ ಚಾಲನೆ ಕೊಡಬೇಕು ಎನ್ನುವ ಉದ್ದೇಶ ನಮ್ಮ ಸರ್ಕಾರಕ್ಕಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಗೊಂದಲದಲ್ಲಿದ್ದಾರೆಂದು ಅನಿಸುತ್ತದೆ. ಒಂದು ಕಡೆ ಗುಂಡ್ಯ ಪವರ್ ಪ್ರಾಜೆಕ್ಟ್‌ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ foundation ಅನ್ನು ಹಾಕಿಸಿದ್ದೀರಿ. ಇನ್ನೊಂದು ಎತ್ತಿನಹೊಳೆ ಮತ್ತು ಹೊಂಗಹಳ್ಳ ಅದಕ್ಕೆ ಸೇರಿ ತುಮಕೂರು ಮತ್ತು ಕೋಲಾರ ಭಾಗಕ್ಕೆ ನೀರನ್ನು ಕೊಡಬೇಕು ಎನ್ನತಕ್ಕಂಥದ್ದಕ್ಕೆ ಸಚಿವ ಸಂಪುಟದ ಅನುಮೋದನೆ ಕೂಡ ಆಗಿದೆ. ನಾನು ಒಂದು ಅಸೆಂಬ್ಲಿ ಪ್ರಶ್ನೆಯಲ್ಲಿ ನೋಡಿದೆ. ಪವರ್ ಪ್ರಾಜೆಕ್ಟ್‌ನ ಯಾವ್ಯಾವುದು ಇದೆ ಎಂದು ಹೇಳಿದಾಗ ಆ ಗುಂಡ್ಯ ಕೂಡ ಇದೆ ಎಂದು ಹೇಳುತ್ತಾರೆ. ಗುಂಡ್ಯವನ್ನು ತೆಗೆದು ಹಾಕಿದ್ದೇವೆ, ಈಗ ಅದು ಇಲ್ಲ. ಅದರ ಬದಲು ಸಂಪೂರ್ಣವಾಗಿ ಅಲ್ಲಿ ಬರತಕ್ಕಂಥ ಎಲ್ಲಾ ನೀರನ್ನು ಇವತ್ತು ಬರಗಾಲ ಇರುವ ಪ್ರದೇಶಕ್ಕೆ ಕೊಡುತ್ತೇವೆ ಎನ್ನುವಂಥ ಒಂದು ನಿರ್ಣಯಕ್ಕಾದರೂ ಬರಬೇಕು. ನೀವು ಅಲ್ಲಿಯೂ ಹೇಳುತ್ತೀರಿ ಇಲ್ಲಿಯೂ ಹೇಳುತ್ತೀರಿ, ಎರಡನ್ನು ಹೇಳುತ್ತಿದ್ದೀರಿ, ಅದು ಹೇಗೆ ಸಾಧ್ಯವಾಗುತ್ತದೆ?

ಅಧ್ಯಕ್ಷರು:– ಮಾನ್ಯ ಮುನಿಯಪ್ಪನವರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರ ಪ್ರಶ್ನೆಗೂ ಸೇರಿಸಿ ಒಟ್ಟಿಗೆ ಉತ್ತರವನ್ನು ಹೇಳಿ ಬಿಡಿ.

ಶ್ರೀ ವಿ. ಮುನಿಯಪ್ಪ:– ಮಾನ್ಯ ಅಧ್ಯಕ್ಷರೆ, ಈ ಪ್ರಕ್ರಿಯೆಯನ್ನು ನಡೆಸುತ್ತಿದ್ದೇವೆನ್ನುವ ಮಾತನ್ನು ಹೇಳಿದ್ದಾರೆ. ಟೆಂಡರ್ ಮಾಡಿ ಎಷ್ಟು ತಿಂಗಳಾಯಿತು, ಸ್ವಾಮಿ? ಇದುವರೆಗೆ ಬೋರ್ಡ್ ಮೀಟಿಂಗ್ ನಲ್ಲಿ ಇಂತಹ ಒಂದು ಕಾರ್ಯಕ್ರಮ ಇಷ್ಟು ವರ್ಷ ಬೇರೆ ಬೇರೆ ಕಾರಣದಿಂದ ಡಿಲೇ ಆಗಿದೆ. ನಾನು ನಿಮ್ಮ ಮೇಲೆ ಆಕ್ಷೇಪಣೆ ಮಾಡುವುದಿಲ್ಲ. ಹಿಂದಿನ ಸರ್ಕಾರಗಳು ಅದರ ಮೇಲೆ ಎಷ್ಟು ಆದ್ಯತೆ ಕೊಟ್ಟು ಪ್ರೋಸೆಸ್ ಮಾಡಬೇಕಾಗಿತ್ತು ಅದರಲ್ಲಿ ವಿಫಲವಾಗಿವೆ. ಅದರಲ್ಲಿ ಎರಡು ಮಾತಿಲ್ಲ. 2000 ನೇ ಇಸವಿಯಲ್ಲಿ ಅವರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿದಂಥ ಸಮಿತಿ ಇದು. ಅವರು 2002 ರಲ್ಲಿಯೇ ವರದಿಯನ್ನು

ಕೊಟ್ಟರು. ಅದರ ಮೇಲೆ NRSAಗೆ 2003ರಲ್ಲಿ ಸರ್ಕಾರ ಹಣ ಕಟ್ಟಿತು. ಇದುವರೆಗೆ ಅವರು ಕೊಟ್ಟಂಥ ವರದಿಯ ಮೇಲೆ ಮ್ಯಾಪ್ ಮತ್ತು digital elevation models ಅನ್ನು ಕೊಟ್ಟ ಮೇಲೆ ಅದರ ಮೇಲೆ ನಿಮ್ಮ ಸರ್ಕಾರ ಸ್ಪಡಿ ಮಾಡಿದೆಯಾ? ಅಲ್ಲಿ ಎಷ್ಟು ಲಭ್ಯತೆ ಇದೆ, rain water source ಎಷ್ಟು ಇದೆ ಎನ್ನುವ ಆಧಾರದ ಮೇಲೆ ಸ್ಪಡಿ ಮಾಡಿದ್ದೀರಾ?

ಶ್ರೀ ಬಸವರಾಜ ಬೊಮ್ಮಾಯಿ :– ಮಾನ್ಯ ಅಧ್ಯಕ್ಷರೆ, digital maps ಏನಿದೆ ಅದನ್ನು ಬಳಕೆ ಮಾಡಿ ಎಂದು ಹೇಳಿದೆ. Service canals ಕೊಟ್ಟಿಲ್ಲ. Service canal ಸಂಪೂರ್ಣವಾದಂಥ physical survey ಮಾಡುವಂಥ ಅವಶ್ಯಕತೆ ಇದೆ. detailed survey ಮಾಡುವಂಥ ಅವಶ್ಯಕತೆ ಇದೆ, detailed project report ಮಾಡುವಂಥ ಅವಶ್ಯಕತೆ ಇದೆ. ಆ ಕಾರಣದಿಂದ ಈ DPR ಮಾಡುತ್ತಿದ್ದೇವೆ. ಅದರಲ್ಲಿ service canal ಕೂಡ ಮಾಡುವುದಕ್ಕೆ ಅವಕಾಶವಿದೆ. ಎಲ್ಲವನ್ನು ಇಟ್ಟುಕೊಂಡು ನಾವು DPR ಮಾಡುತ್ತಿದ್ದೇವೆ. ಡಾ॥ ಪರಮಶಿವಯ್ಯನವರು ಕೆಲವು ಬದಲಾವಣೆಗಳನ್ನು ಲಿಖಿತ ಮೂಲಕ ಕೊಟ್ಟಿದ್ದಾರೆ. ಸುಮಾರು 14 complete statements, 6 line diagrams ಕೊಟ್ಟಿದ್ದಾರೆ. ಒಟ್ಟು 20 enclosures ಮಾಡಿ detail ಆಗಿ ಕೊಟ್ಟಿದ್ದಾರೆ. ಅದಕ್ಕೆ DPR ಅಳವಡಿಸುತ್ತಿದ್ದೇವೆ. ಏಕೆಂದರೆ ಮುಂದೆ ಇದಕ್ಕೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಇದೊಂದು ಶಾಶ್ವತವಾಗಿ ಪಶ್ಚಿಮಮುಖಿ ನೀರನ್ನು ನಮ್ಮ ರಾಜ್ಯದ ಬರಗಾಲ ಪೀಡಿತ ಪ್ರದೇಶಕ್ಕೆ DPR ಒಂದು ತರಹ viable ಆಗುತ್ತದೆ. ಯಾರೇ ಬಂದರೂ ಕೂಡ ಅದನ್ನು ಅನುಷ್ಠಾನ ಮಾಡುವಂಥ ಒಂದು ವ್ಯವಸ್ಥೆ ಆಗುತ್ತದೆ. ಆದ್ದರಿಂದ ಅದಕ್ಕೆ 23.50 ಕೋಟಿ ರೂ.ಗಳು ಖರ್ಚಾದರೂ ಚಿಂತೆ ಇಲ್ಲ. ಇದು ಶಾಶ್ವತವಾಗಿ ಒಂದು viable ಆಗಿ ಇರಬೇಕು. ಈ ದಾಖಲೆಯ ಮುಖಾಂತರ ಮುಂದಿನ ಎಲ್ಲಾ ಯೋಜನೆಗಳು ಆಗಬೇಕು ಎನ್ನುವ ಒಂದು ದೃಷ್ಟಿಯಿಂದ ಒಂದು ಕ್ರಮವನ್ನು ನಾವು ಜರುಗಿಸಿದ್ದೇವೆ. ತಾವು ಅದನ್ನು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:– ಇದರ ಬಗ್ಗೆ ಸಾಕಷ್ಟು ಪ್ರಶ್ನೆಯನ್ನು ಕೇಳಲಾಗಿದೆ.

ಶ್ರೀ ವಿ. ಮುನಿಯಪ್ಪ:– ಇದೊಂದು ಮಹತ್ತರವಾದ ಯೋಜನೆ.

ಅಧ್ಯಕ್ಷರು:– ಮಹತ್ತರವಾದದ್ದು ಎಂದರೆ ಬೇರೆ ರೂಪದಲ್ಲಿ ತನ್ನಿ. ಪ್ರಶ್ನೋತ್ತರದಲ್ಲಿ ಹೆಚ್ಚಿಗೆ ಕೇಳುವುದಕ್ಕೆ ಅವಕಾಶವಿಲ್ಲ. ಪ್ರಶ್ನೋತ್ತರದಲ್ಲಿ ದೀರ್ಘವಾದ ಚರ್ಚೆಗೆ ಹೇಗೆ ಅವಕಾಶ ಕೊಡುವುದು. ಮಾನ್ಯ ತುಕಾರಾಂ ರವರು ತಮ್ಮ ಪ್ರಶ್ನೆಯನ್ನು ಕೇಳಿ. ನಾನು ತುಕಾರಾಂ ರವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಗುಂಡ್ಯ ಯೋಜನೆ ಇದರ ಕೆಳ ಹಂತದಲ್ಲಿದೆ. ಅದಕ್ಕೆ ಏನು ತೊಂದರೆ ಆಗುವುದಿಲ್ಲ. ಗುಂಡ್ಯ ಪವರ್ ಯೊಜನೆ ಈಗಾಗಲೇ environment ದೃಷ್ಟಿಯಿಂದ ಕೆಲವು ತಕರಾರುಗಳು ಆಗಿ ನಿಂತಿರುವುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ಯೋಜನೆಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ವಿಶ್ವನಾಥ್:– ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ದೇವನಹಳ್ಳಿ ಎಲ್ಲಾ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು:– ಸಾಕಷ್ಟು ಪ್ರಶ್ನೆಯನ್ನು ಕೇಳಿದ್ದೀರಿ.

(ಗೊಂದಲ)

ಡಾ॥ ಎಂ.ಸಿ. ಸುಧಾಕರ್:– ಬಯಲು ಸೀಮೆಯಲ್ಲಿ 74 ತಾಲ್ಲೂಕುಗಳು ಇವೆ.

ಅಧ್ಯಕ್ಷರು:– ಇದು ಪ್ರಶ್ನೋತ್ತರ ವೇಳೆ, ಒಂದು ಪ್ರಶ್ನೆಗೆ 15 ನಿಮಿಷ ತೆಗೆದುಕೊಂಡರೆ ಹೇಗೆ? ನೀವು ಬೇರೆ ರೂಪದಲ್ಲಿ ತನ್ನಿ, ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ವಿಶ್ವನಾಥ್:– ಕುಡಿಯುವ ನೀರಿಲ್ಲ, ಇಂಡಸ್ಟ್ರಿಗಳ ಬಗ್ಗೆ ಹೇಳುತ್ತಿದ್ದಾರೆ. ಚಿಕ್ಕಬಳ್ಳಾಪರ, ಯಲಹಂಕ, ದೇವನಹಳ್ಳಿ ಆ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ. ಅದಕ್ಕಾಗಿ ಮೊದಲು ಕುಡಿಯುವ ನೀರಿಗೆ ಸಾಕಷ್ಟು ತೊಂದರೆ ಇರುವುದರಿಂದ ದಯವಿಟ್ಟು ಮಾನ್ಯ ಸಚಿವರು ಗಮನ ಹರಿಸಬೇಕು. ಅರ್ಕಾವತಿ ನದಿಯ ಬಗ್ಗೆ ಹೇಳಬೇಕು. ದೇವನಹಳ್ಳಿಗೆ ಹೇಮಾವತಿ ನದಿಯಿಂದ ನೀರು ಕೂಡ ತರಬೇಕು.

ಶ್ರೀ ಬಸವರಾಜ ಬೊಮ್ಮಾಯಿ:– ಅರ್ಕಾವತಿ ನದಿಯ ಬಗ್ಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು:– ಒಂದೇ ಪ್ರಶ್ನೆಗೆ ಹೀಗೆ ಮಾಡಿದರೆ ಹೇಗೆ?

ಡಾ॥ ಎಂ.ಸಿ. ಸುಧಾಕರ್:– ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಿ. 2004ರಿಂದ ಸನ್ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಸಾಕಷ್ಟು ಪ್ರಕ್ರಿಯೆಯನ್ನು ಮಾಡಿದ್ದಾರೆ. ಎಲ್ಲೋ ಒಂದು ಕಡೆ ಅಧಿಕಾರಿ ವರ್ಗದವರು ಅಡ್ಡ ಹಾಕುವಂಥ ಪ್ರಯತ್ನವಾಗುತ್ತಿದೆ. ಆದರೆ ಮಂತ್ರಿಗಳು ಒಳ್ಳೆಯ ದಿಕ್ಕಿನಲ್ಲಿ ಸಾಗುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇದನ್ನು ತ್ವರಿತವಾಗಿ ಮಾಡಿ ಎನ್ನುವ ಒಂದು ಬೇಡಿಕೆ ನಮ್ಮದಾಗಿದೆ. ಮಂಡ್ಯ ಜಿಲ್ಲೆಯಲ್ಲಿ ವಿಶ್ವೇಶ್ವರಯ್ಯನವರು ಕೆ.ಆರ್.ಎಸ್. ಕಟ್ಟಿದ್ದರು. ಆ ಒಂದು ಭಾಗಕ್ಕೆ ದಯವಿಟ್ಟು ತಾವು ಶಾಶ್ವತವಾದ ನೀರನ್ನು ಕೊಟ್ಟು ಆ ಒಂದು ಸ್ಥಾನಕ್ಕೆ ನೀವು ಹೋಗಬೇಕೆಂದು ನಮ್ಮ ಬಯಕೆ ಇದೆ.

ಶ್ರೀ ವಿ. ಮುನಿಯಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ದಯವಿಟ್ಟು ಒಂದೇ ಒಂದು clarification ಕೇಳುತ್ತೇನೆ.

ಅಧ್ಯಕ್ಷರು:– ಸಾಕು. ತಾವು ಈಗಾಗಲೇ ಸಾಕಷ್ಟು ಕೇಳಿದ್ದೀರಿ. ನಾನು ತುಕಾರಾಂ ರವರನ್ನು ಮಾತನಾಡಲು ಕರೆದಿದ್ದೇನೆ. ಕುಳಿತುಕೊಳ್ಳಿ.

ಶ್ರೀ ವಿ. ಮುನಿಯಪ್ಪ:– ಮಾನ್ಯ ಅಧ್ಯಕ್ಷರೆ, ದಯವಿಟ್ಟು ಒಂದೇ ಒಂದು clarification ಕೇಳುತ್ತೇನೆ.

ಅಧ್ಯಕ್ಷರು:– ಆಯಿತು, ಕೇಳಿ.

ಶ್ರೀ ವಿ. ಮುನಿಯಪ್ಪ:– ಎತ್ತಿನಹೊಳೆ ಬಗ್ಗೆ Feasibility report ತಯಾರು ಮಾಡಿ ನೀರಾವರಿ ನಿಗಮದ ಮುಂದೆ ಇಟ್ಟು ಎಷ್ಟು ದಿವಸವಾಯಿತು? ಇದರ ಬಗ್ಗೆ ತುರ್ತು ಸಭೆ ಕರೆದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಏನು ಕಷ್ಟ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:– ನಾನು ಆಗಲೇ ಹೇಳಿದ್ದೇನೆ. Feasibility report ಈಗಾಗಲೇ ನೀರಾವರಿ ನಿಗಮ ಒಪ್ಪಿಗೆ ಕೊಟ್ಟಿದೆ.

ಶ್ರೀ ವಿ. ಮುನಿಯಪ್ಪ:– ನೀವು ಕೊಟ್ಟಿರುವ ಉತ್ತರದಲ್ಲಿ ಆ ರೀತಿ ಇಲ್ಲ. ಅನುಮತಿಗಾಗಿ ಇಲಾಖೆಯ ಮುಂದಿಡಲಾಗಿದೆ ಎಂದು ಇದೆ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:– ನಾವು ಡಿ.ಪಿ.ಆರ್ ಬಗ್ಗೆ ಹೇಳಿದ್ದೇವೆ. Feasibility report ಬಗ್ಗೆ ಹೇಳಿಲ್ಲ.

ಶ್ರೀ ವಿ. ಮುನಿಯಪ್ಪ:– ಆಯಿತು, ಅನುಮತಿ ಕೊಟ್ಟ ತಕ್ಷಣ ಇದನ್ನು progress ಮಾಡಿಸಿ. ದಯವಿಟ್ಟು ಈ ಒಂದು ಸರ್ಕಾರ ಇದ್ದಾಗಲೇ ಒಳ್ಳೆಯದು ಮಾಡುವುದಾದರೆ ನಿಮಗೂ ಕೀರ್ತಿ ಬರುತ್ತದೆ. ಬಹುತೇಕ ಸಮಸ್ಯೆಗಳು ಬಗೆಹರಿಯುತ್ತವೆ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:– ಖಂಡಿತವಾಗಿಯೂ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, ಬರಗಾಲ ಪೀಡಿತ ಪ್ರದೇಶಕ್ಕೆ ಹೋಗಿದ್ದೇನೆ. ಅಲ್ಲಿನ ಪರಿಸ್ಥಿತಿ ಗೊತ್ತಿದೆ. ಆದ್ದರಿಂದ ಈ ಯೋಜನೆಯನ್ನು ಖಂಡಿತವಾಗಿಯೂ ನಿಗದಿತ ಅವಧಿಯಲ್ಲಿ ನಾವು ಪ್ರಾರಂಭ ಮಾಡುತ್ತೇವೆ.

ಅಧ್ಯಕ್ಷರು:– ಇ. ತುಕಾರಾಂ ರವರು ಪ್ರಶ್ನೆ ಕೇಳಿ.

ಕೆರೆ ಹೂಳೆತ್ತುವ ಮತ್ತು ರಿಪೇರಿ ಕಾರ್ಯ

72 (727) ಶ್ರೀ ತುಕಾರಾಮ್.ಇ (ಸಂಡೂರು) ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸಂಡೂರು ತಾಲ್ಲೂಕಿನಲ್ಲಿ ಗಣಿ ಧೂಳಿನಿಂದ ನಾರೀಹಳ್ಳ, ಹೊಸದರೋಜಿ ಹಾಗೂ ಹಾವಿನಮಡಗು ಕೆರೆಗಳಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸದರಿ ಕೆರೆಗಳಲ್ಲಿ ಹೂಳೆತ್ತುವ ಕಾಮಗಾರಿಗಳನ್ನು ಸರ್ಕಾರ ಎಂದಿನಿಂದ ಪ್ರಾರಂಭಿಸಲಾಗುವುದು;

(ಇ) ಅಂಕಮನಾಳ ಕೆರೆ ದುರಸ್ತಿ ಬಗ್ಗೆ ಇದುವರೆವಿಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲದೇ ಇರಲು ಕಾರಣವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

(ಅ) ಬಂದಿದೆ.

(ಆ) 13ನೇ ಹಣಕಾಸು ಆಯೋಗದ ಅನುದಾನದ ಕ್ರಿಯಾ ಯೋಜನೆಯಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ ಅಡವಿನಮಡಗು ಕೆರೆಯ ಹೂಳೆತ್ತುವ ಕೆಲಸವು ಸೇರಿದಂತೆ ಅದರ ಪುನರುಜ್ಜೀವನಕ್ಕಾಗಿ ರೂ. 63.92 ಲಕ್ಷಗಳ ಅಂದಾಜು ಮೊತ್ತಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಂದಾಜು ಪಟ್ಟಿಯು ಮಂಜೂರಾತಿ ಹಂತದಲ್ಲಿದ್ದು, ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.